ಒಮ್ಮೆ ವಿಜಯದಾಸರು ತಿರುಪತಿಯಲ್ಲಿ, ಬ್ರಹ್ಮೋತ್ಸವ ಸಮಯದಲ್ಲಿ  ರಥ ಮುಂದೆ ಹೋಗದಿದ್ದಾಗ ಹಾಡಿದ ದೇವರನಾಮ.
ನಂತರ ರಥೋತ್ಸವದ ರಥ ಮುಂದೆ ಹೋಯಿತಂತೆ

ಸಾಗಿ ಬಾರಯ್ಯ ಭವರೋಗದ ವೈದ್ಯನೆ
ಬಾಗುವೆ ನಿನಗೆ ಚೆನ್ನಾಗಿ ತುತಿಸಿ ಇಂದು ।
ಭಾಗೀರತಿಪಿತ ಭಾಗವತರ ಸಂಯೋಗ
ರಂಗ ಉರಗಗಿರಿ ವೇಂಕಟ ।

ಸಾಗಿ ಬಾರಯ್ಯ ।

ರಥದ ಮಧ್ಯದಲ್ಲಿಪ್ಪನೆ ರಥಗಾನುಜವಾಹನ
ರಥಾಂಗಪಾಣಿಯೆ ದಶರಥನೃಪತಿ ಪಾಲ ।
ಪಾರ್ಥಗೆ ಸಾರಥಿಯಾಗಿ ರಥವ ನಡೆಸಿ ।
ಅಥಿರಥಮಹಾರಥರ ವಿರಥರ ಮಾಡಿ ಗೆಲಿಸಿದೆ ।
ಪ್ರಥಮದೈವವೆ ಮನ್ಮಥಪಿತದೈತ್ಯರ
ಮಥನ ಭಕ್ತರ ಮನೋರಥ ಪರಿಪೂರ್ಣನೆ
ಪಥಮಣಿವರ್ಣನೆ ಕಥಾಶ್ರವಣದಲಿ
ಸುಪಥವ ತೋರಿಸುತಿಪ್ಪ ಪ್ರಥಮಾಂಗನೊಡೆಯಾ । ೧ ।

ಸಾಗಿ ಬಾರಯ್ಯ ।

ನಿಲ್ಲದೆ ಬರುವುದು ಫುಲ್ಲಲೋಚನ ಸಿರಿ–
ವಲ್ಲಭ ಸರ್ವರಿಗೆ ಬಲ್ಲಿದನೆ ಅಪ್ರತಿ–
ಮಲ್ಲ ಮುರವಿರೋಧಿಯೆ ಮೆಲ್ಲ ಮೆಲ್ಲನೆ
ಪಾದ ಫಲ್ಲವ ತೋರಿಸುತ್ತಾ ಇಲ್ಲ ಕಾಲದಿ ನಮ್ಮ
ನೆಲ್ಲ ಉದ್ಧರಿಸುವುದು ಎಲ್ಲಿ ನಿನಗೆ ಸರಿ–
ಯಿಲ್ಲವೋ ನೋಡಲು ಸಲ್ಲುವುದೊ ಬಿರುದಲ್ಲಿ
ಗಲ್ಲಿಗೆ ಗುಣ ಬಲ್ಲವರಾರಿನ್ನು –
ನೆಲ್ಲ ಕೋಟಿ ಕೊನೆಯಲಿಪ್ಪ ವಿಶ್ವ ॥ ೨ ॥
ಸಾಗಿ ಬಾರಯ್ಯ ।

ಬೊಮ್ಮ ಮೊದಲು ಮನುಜೋತ್ತಮರು ಕಡೆಯಾಗಿ
ನಿಮ್ಮ ದಾಸರು ಅವರ ಸಂಬಂಧಿಗಳ ಪಾದ
ನಮ್ಮಿಕೊಂಡಿಪ್ಪ ಅಧಮ ನಾ ಸರ್ವೋತ್ತಮನೆ
ಅನೇಕ ಮಹಿಮ ಸರ್ವಭೂಷಿತ ಈ–
ರೆಮ್ಮೆ ಮಹಿಷರೆ ಗೂಡಿ ಸಮ್ಮೊಗ–
ವಾಗುತ ಘಮ್ಮನೆ ಬಾ ಬಾ ।
ಹಿಮ್ಮೆಟ್ಟದೆ ಸಿರಿವಿಜಯವಿಠಲ ಅನುಪಮ್ಮ–
ಚರಿತ ಪರಬೊಮ್ಮ ತಿರುಮಲೇಶ ॥
ಸಾಗಿ ಬಾರಯ್ಯ ।

सागि बारय्य भवरोगद वैद्यनॆ
बागुवॆ निनगॆ चॆन्नागि तुतिसि इंदु ।
भागीरतिपित भागवतर संयोग
रंग उरगगिरि वेंकट ।

सागि बारय्य ।

रथद मध्यदल्लिप्पनॆ रथगानुजवाहन
रथांगपाणियॆ दशरथनृपति पाल ।
पार्थगॆ सारथियागि रथव नडॆसि ।
अथिरथमहारथर विरथर माडि गॆलिसिदॆ ।
प्रथमदैववॆ मन्मथपितदैत्यर
मथन भक्तर मनोरथ परिपूर्णनॆ
\पथमणिवर्णनॆ कथाश्रवणदलि
सुपथव तोरिसुतिप्प प्रथमांगनॊडॆया । १ ।

सागि बारय्य ।

निल्लदॆ बरुवुदु फुल्ललोचन सिरि–
वल्लभ सर्वरिगॆ बल्लिदनॆ अप्रति–
मल्ल मुरविरोधियॆ मॆल्ल मॆल्लनॆ
पाद फल्लव तोरिसुत्ता इल्ल कालदि नम्म
नॆल्ल उद्धरिसुवुदु ऐल्लि निनगॆ सरि–
यिल्लवो नोडलु सल्लुवुदॊ बिरुदल्लि
गल्लिगॆ गुण बल्लवरारिन्नु –
नॆल्ल कोटि कॊनॆयलिप्प विश्व ॥ २ ॥

सागि बारय्य ।

बॊम्म मॊदलु मनुजोत्तमरु कडॆयागि
निम्म दासरु अवर संबंधिगळ पाद
नम्मिकॊंडिप्प अधम ना सर्वोत्तमनॆ
अनेक महिम सर्वभूषित ई–
रॆम्मॆ महिषॆरॆ गूडि सम्मॊग–
वागुत घम्मनॆ बा बा ।
हिम्मॊ दॆ सिरिविजयविठल अनुपम्म–
चरित परबॊम्म तिरुमलेश ॥

साग़ि बारय्य ।

Collection by Narahari Sumadhwa (9916904341)
For www.sumadhwaseva.com
Email : Naraharisumadhwa@yahoo.in